**ಎಸ್. ಎಸ್. ಎಲ್. ಸಿ. ಪ್ರಥಮ ಭಾಷೆ ಕನ್ನಡ**

**ಸಾರ್ವತ್ರಿಕ ಪರೀಕ್ಷೆ ಮಾರ್ಚ್ – 2022**

**ಮುದ್ದು ಮಕ್ಕಳಿಗಾಗಿ (ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ)**

**ಯಾವುದೇ ಸಂದರ್ಭದ ಪ್ರಶ್ನೆಗಳನ್ನು ಸುಲಭವಾಗಿ ಉತ್ತರಿಸುವ ವಿಧಾನ.**

**(30 ಅಂಕಗಳು ಬರುತ್ತವೆ.)**

**ಗದ್ಯ – 1. ಯುದ್ಧ.**

**ಆಯ್ಕೆ :** ಈ ವಾಕ್ಯವನ್ನು **ಶ್ರೀಮತಿ ಸಾರಾ ಅಬೂಬಕ್ಕರ್** ಅವರು ರಚಿಸಿರುವ **'ಚಪ್ಪಲಿಗಳು'** ಕಥಾ ಸಂಕಲನದಿಂದ ಆಯ್ದ **'ಯುದ್ಧ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ವೈಮಾನಿಕ ದಾಳಿಯಿಂದ ಗಾಯಗೊಂಡ ವೈದ್ಯ ಸೈನಿಕನಾದ ರಾಹುಲ ಮತ್ತು ಮುದುಕಿಯ ನಡುವೆ ಸಂವಾದ ನಡೆಯುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಗದ್ಯ – 2. ಶಬರಿ.**

**ಆಯ್ಕೆ :–** ಈ ವಾಕ್ಯವನ್ನು **ಶ್ರೀರಂಗ ಮತ್ತು ನಾ. ಕಸ್ತೂರಿ** ಅವರು ಸಂಪಾದಿಸಿರುವ **'ಏಕಾಂಕ ನಾಟಕಗಳು'** ಕೃತಿಯಿಂದ ಆಯ್ದ **ಪು. ತಿ.ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆರಿಸಲಾಗಿದೆ.

**ಸಂದರ್ಭ :** ಮತಂಗಾಶ್ರಮಕ್ಕೆ ಬಂದ ರಾಮಲಕ್ಷ್ಮಣರನ್ನು ಶಬರಿಯು ಉಪಚರಿಸಿ ಸಂವಾದ ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಗದ್ಯ – 3. ಲಂಡನ್ ನಗರ.**

**ಆಯ್ಕೆ :–** ಈ ವಾಕ್ಯವನ್ನು ವಿ. ಕೃ. **ಗೋಕಾಕ್** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಲೇಖಕರಾದ ವಿ. ಕೃ. ಗೋಕಾಕ್ ಅವರು ಲಂಡನ್ ನಗರದ ವೈಭವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಗದ್ಯ – 4. ಭಾಗ್ಯಶಿಲ್ಪಿಗಳು.**

**ಆಯ್ಕೆ :** ಈ ವಾಕ್ಯವನ್ನು **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಪಾಠದ ಭಾಗವಾಗಿ ಸಮಿತಿಯು ರಚಿಸಿದ **'ನಾಲ್ವಡಿ ಕೃಷ್ಣರಾಜ ಒಡೆಯರ್'** ಎಂಬ ಲೇಖನದಿಂದ ಆರಿಸಲಾಗಿದೆ.

**ಸಂದರ್ಭ :** ನಾಲ್ವಡಿ ಕೃಷ್ಣರಾಜ ಅವರ ಜೀವನ ಸಾಧನೆಗಳನ್ನು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಆಯ್ಕೆ :** ಈ ವಾಕ್ಯವನ್ನು **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಪಾಠದ ಭಾಗವಾಗಿ **ಶ್ರೀ ಡಿ. ಎಸ್. ಜಯಪ್ಪಗೌಡ** ಅವರು ರಚಿಸಿದ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಸರ್. ಎಂ. ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಲೇಖಕರು ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯ ಸಾಧನೆಗಳನ್ನು ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಗದ್ಯ – 5. ಎದೆಗೆ ಬಿದ್ದ ಅಕ್ಷರ.**

**ಆಯ್ಕೆ :** ಈ ವಾಕ್ಯವನ್ನು ಶ್ರೀ **ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ : ಲೇಖಕರಾದ ದೇವನೂರು ಮಹಾದೇವ ಅವರು ಕಾರುಣ್ಯ ಸಮತೆಯ ಬುದ್ಧನೇ ನನ್ನ ದೇವರು / ನಡೆನುಡಿಗಳ ಸಮನ್ವಯವೇ ಅರಿವು ಎಂದ ಶರಣರು / ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ವೈಜ್ಞಾನಿಕ ಸತ್ಯವನ್ನು ಕುರಿತು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಗದ್ಯ – 6. ವ್ಯಾಘ್ರಗೀತೆ.

**ಆಯ್ಕೆ :** ಈ ವಾಕ್ಯವನ್ನು ಶ್ರೀ ಎ. ಎನ್. **ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಶಾನುಭೋಗರು ಮತ್ತು ಹುಲಿಯ ನಡುವಿನ ಹೋರಾಟದ ಬಗ್ಗೆ ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಗದ್ಯ – 7. ವೃಕ್ಷಸಾಕ್ಷಿ.

**ಆಯ್ಕೆ :** ಈ ವಾಕ್ಯವನ್ನು ಶ್ರೀ **ಗುಂಡ್ಮಿ ಚಂದ್ರಶೇಖರ ಐತಾಳ ಅವರು ಸಂಪಾದಿಸಿರುವ ದುರ್ಗಸಿಂಹ ಕವಿಯು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ : ವೃಕ್ಷಸಾಕ್ಷಿ ಕಥೆಯಲ್ಲಿ ಬರುವ ಧರ್ಮಬುದ್ಧಿಯ ಧರ್ಮಗುಣ ಮತ್ತು ದುಷ್ಟಬುದ್ಧಿಯ ಕಪಟತನಗಳ ನಡುವೆ ನಡೆದ ಹೋರಾಟದ ಬಗ್ಗೆ ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಪದ್ಯ – 1 ಸಂಕಲ್ಪಗೀತೆ.**

**ಆಯ್ಕೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :** ಕವಿ ಜಿ. ಎಸ್. ಶಿವರುದ್ರಪ್ಪ ಅವರು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಪದ್ಯ – 2. ಹಕ್ಕಿ ಹಾರುತಿದೆ ನೋಡಿದಿರಾ.**

**ಆಯ್ಕೆ :** ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಪದ್ಯ – 3. ಹಲಗಲಿಯ ಬೇಡರು.**

**ಆಯ್ಕೆ :** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :** ಲಾವಣಿಕಾರನು ಮುಧೋಳ ಸಂಸ್ಥಾನದ ಹಲಗಲಿ ಗ್ರಾಮದಲ್ಲಿ ನಡೆದ ಹಲಗಲಿಯ ಬೇಡರ ಹತಾರ ಕದನದ ಮಹತ್ತ್ವವನ್ನು ವರ್ಣಿಸುವ ಈ ಮಾತು ಬಂದಿದೆ.

**ಪದ್ಯ – 4. ಕೌರವೇಂದ್ರನ ಕೊಂದೆ ನೀನು.**

**ಆಯ್ಕೆ :** ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ' ಎಂಬ** ಮಹಾಕಾವ್ಯದ ಉದ್ಯೋಗಪರ್ವದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**



Use E-Papers, Save Tress
Above line hide when print out

**ಸಂದರ್ಭ** : ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಪದ್ಯ – 5. ಹಸುರು**

**ಆಯ್ಕೆ :–** ಈ ವಾಕ್ಯವನ್ನು **'ಕುವೆಂಪು'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ರಚಿಸಿರುವ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಕವನದಿಂದ ಆರಿಸಲಾಗಿದೆ.

**ಸಂದರ್ಭ :–** ಕವಿ ಕುವೆಂಪು ಅವರು ಕುಪ್ಪಳ್ಳಿಯ ಕವಿಶೈಲದ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಸಸ್ಯ ಸಮೃದ್ಧಿಯಿಂದ ಹೆಪ್ಪಗಟ್ಟಿದ ಹಚ್ಚಹಸುರಿನ ಸೌಂದರ್ಯವನ್ನು ಕಂಡು ಆನಂದದಿಂದ ವರ್ಣನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಪದ್ಯ – 6. ಛಲಮನೆ ಮೆರೆವೆಂ.**

**ಆಯ್ಕೆ :–** ಈ ವಾಕ್ಯವನ್ನು **ಪ್ರೊ. ಹಂಪ ನಾಗರಾಜಯ್ಯ** ಅವರು ಸಂಪಾದಿಸಿರುವ **'ರನ್ನ ಸಂಪುಟದ'** ಮಹಾಕವಿ **ರನ್ನನ 'ಸಾಹಸಭೀಮ ವಿಜಯಂ'** ಕೃತಿಯಿಂದ ಆಯ್ದ **'ಛಲಮನೆ ಮೆಱೆವೆಂ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕುರುಕ್ಷೇತ್ರಯುದ್ಧದ ಸಮಯದಲ್ಲಿ ದುರ್ಯೋಧನನು ತನ್ನ ತಂದೆತಾಯಿಗಳ ಅಪೇಕ್ಷೆಯಂತೆ ಶರಶಯ್ಯೆಯಲ್ಲಿ ಮಲಗಿರುವ ಭೀಷ್ಮರ ಸಲಹೆಯನ್ನು ಪಡೆಯಲು ಬಂದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಪದ್ಯ – 7. ವೀರಲವ.**

**ಆಯ್ಕೆ:** ಈ ವಾಕ್ಯವನ್ನು **ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ. ಶಿವಮೂರ್ತಿ ಶಾಸ್ತ್ರೀ ಅವರು** ಸಂಪಾದಿಸಿರುವ **ಕವಿ ಲಕ್ಷ್ಮೀಶನು** ವಿರಚಿತ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ದೇಶದೇಶವನ್ನೆಲ್ಲ ಸಂಚರಿಸಿ ವಾಲ್ಮೀಕಿಯ ಆಶ್ರಮಕ್ಕೆ ಬಂದ ಸಂದರ್ಭದಲ್ಲಿ ಈ ಮಾತು ಬಂದಿದೆ.

## ಕವಿ / ಸಾಹಿತಿಗಳ ಪರಿಚಯ

**1. ಸಾರಾ ಅಬೂಬಕ್ಕರ್ : ಶ್ರೀಮತಿ ಸಾರಾ ಅಬೂಬಕ್ಕರ್** ಅವರು ಕ್ರಿ. ಶ. 1936 ರಲ್ಲಿ **ಕಾಸರಗೋಡಿನಲ್ಲಿ** ಜನಿಸಿದರು. ಇವರು **ಚಪ್ಪಲಿಗಳು,** ಖೆಡ್ಡಾ, ಪಯಣ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಕಥಾ ಸಂಕಲನಗಳನ್ನು ಹಾಗೂ ಚಂದ್ರಗಿರಿಯ ತೀರದಲ್ಲಿ, ಕದನವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ನೃಪತುಂಗ ಪ್ರಶಸ್ತಿಯೂ ಸಹ ಇವರಿಗೆ ಲಭಿಸಿದೆ.

*****

**2. ಪು. ತಿ. ನರಸಿಂಹಾಚಾರ್ : ಶ್ರೀ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ** ಅವರು ಕ್ರಿ. ಶ. 1905 ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆ**ಯಲ್ಲಿ ಜನಿಸಿದರು. ಇವರು **ಶಬರಿ,** ಅಹಲ್ಯೆ, ಗೋಕುಲ ನಿರ್ಗಮನ, ಕವಿ ಮತ್ತು ದೋಣಿಯ ಬಿಯದ, ವಿಕಟಕವಿ ವಿಜಯ, ಹಂಸ ದಮಯಂತಿ ಮೊದಲಾದ ಕೃತಿಗಳನ್ನೂ ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸರ್ಕಾರದಿಂದ **'ಪಂಪ ಪ್ರಶಸ್ತಿ',** ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

*****

**3. ವಿ. ಕೃ. ಗೋಕಾಕ್ : 'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು **ಕ್ರಿ. ಶ. 1909** ರಲ್ಲಿ ಹಾವೇರಿ ಜಿಲ್ಲೆಯ **ಸವಣೂರಿನಲ್ಲಿ** ಜನಿಸಿದರು. ಇವರು ಸಮುದ್ರದಾಚೆಯಿಂದ, ಜೀವನಪಾಠಗಳು, ಭಾರತ ಸಿಂಧು ರಶ್ಮಿ, ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ದ್ಯಾವಾಪೃಥಿವೀ, ಸಮರಸವೇ ಜೀವನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್ ಪದವಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**4. ಡಿ. ಎಸ್. ಜಯಪ್ಪಗೌಡ : ಶ್ರೀ ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ** ಅವರು ಕ್ರಿ. ಶ. 1947ರಲ್ಲಿ ಚಿಕ್ಕಮಗಳೂರು ಜಿಲ್ಲೆಯ **ದಾರದಹಳ್ಳಿಯಲ್ಲಿ** ಜನಿಸಿದರು. ಇವರು **ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು,** ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು, ಜನಪದ ಆಟಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

*****

**5. ದೇವನೂರು ಮಹಾದೇವ : ಶ್ರೀ ದೇವನೂರು ಮಹಾದೇವ** ಅವರು ಕ್ರಿ. ಶ. 1948 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ **ದೇವನೂರಿನಲ್ಲಿ** ಜನಿಸಿದರು. ಇವರು **ಎದೆಗೆ ಬಿದ್ದ ಅಕ್ಷರ.** ಕುಸುಮ ಬಾಲೆ, ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೋ, ನಂಬಿಕೆಯ ನಂಟ, ನೋಡು ಮತ್ತು ಕೂಡು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

*****

**6. ಎ. ಎನ್. ಮೂರ್ತಿರಾವ್ : ಶ್ರೀ ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್** ಅವರು **ಕ್ರಿ. ಶ. 1900 ರಲ್ಲಿ** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ **ಅಕ್ಕಿಹೆಬ್ಬಾಳು** ಗ್ರಾಮದಲ್ಲಿ ಜನಿಸಿದರು. ಇವರು **ಸಮಗ್ರ ಲಲಿತಪ್ರಬಂಧಗಳು,** ದೇವರು, ಹಗಲುಗನಸು, ಅಲೆಯುವ ಮನ, ಅಪರವಯಸ್ಕನ ಅಮೆರಿಕಾ ಯಾತ್ರೆ, ಚಂಡಮಾರುತ, ಮಿನುಗು ಮಿಂಚು, ಪೂರ್ವಸೂರಿಗಳೊಡನೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

*****

**7. ದುರ್ಗಸಿಂಹ : ಶ್ರೀ ದುರ್ಗಸಿಂಹನು ಕ್ರಿ. ಶ. ಸುಮಾರು 1031 ರಲ್ಲಿ** ಕಿಸುಕಾಡು ನಾಡಿನ **ಸಯ್ಯಡಿಯಲ್ಲಿ** ಜನಿಸಿದನು. ಇವನು ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು. ಮತಧರ್ಮ ಸಮನ್ವಯನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ನಿರ್ಮಿಸಿದ್ದಾನೆ. ಈತನು **'ಕರ್ಣಾಟಕ ಪಂಚತಂತ್ರ'** ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ.

## ಪದ್ಯ ಭಾಗ 1 ಪ್ರಶ್ನೆ

**1. ಜಿ. ಎಸ್. ಶಿವರುದ್ರಪ್ಪ :** ಸಮನ್ವಯ ಕವಿ ಎಂದು ಪ್ರಸಿದ್ಧರಾದ **ಶ್ರೀ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ** ಅವರು **ಕ್ರಿ. ಶ. 1926** ರಲ್ಲಿ ಶಿವಮೊಗ್ಗ ಜಿಲ್ಲೆಯ **ಶಿಕಾರಿಪುರದಲ್ಲಿ** ಜನಿಸಿದರು. ಆಧುನಿಕ ಕಾಲದ ಪ್ರಮುಖ ಕವಿಗಳಾದ ಇವರು **ಎದೆತುಂಬಿ ಹಾಡಿದೆನು,**



Use E-Papers, Save Tress
Above line hide when print out

ಸಾಮಗಾನ, ಚೆಲುವು-ಒಲವು, ದೇವಶಿಲ್ಪಿ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವ ಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ, ಕಾವ್ಯಾರ್ಥ ಚಿಂತನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ **ರಾಷ್ಟ್ರಕವಿ ಪ್ರಶಸ್ತಿ,** ನಾಡೋಜ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ.

*****

**2. ದ. ರಾ. ಬೇಂದ್ರೆ : ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ** ಅವರು **ಕ್ರಿ. ಶ. 1896** ರಲ್ಲಿ **ಧಾರವಾಡ**ದಲ್ಲಿ ಜನಿಸಿದರು. ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಗರಿ,** ನಾಕುತಂತಿ, ನಾದಲೀಲೆ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ಮೇಘದೂತ, ಗಂಗಾವತರಣ, ಅರಳು ಮರಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**3. ಕುಮಾರವ್ಯಾಸ : ಕುಮಾರವ್ಯಾಸ** ಎಂದು ಪ್ರಸಿದ್ಧನಾಗಿರುವ **ಗದುಗಿನ ನಾರಣಪ್ಪ** ಅವರು **ಕ್ರಿ. ಶ. ಸುಮಾರು 1430** ರಲ್ಲಿ ಗದಗ ಪ್ರಾಂತ್ಯದ **ಕೋಳಿವಾಡ**ದಲ್ಲಿ ಜನಿಸಿದರು. ಇವರು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿ ಕುಮಾರವ್ಯಾಸ ಎಂಬ ಅಭಿದಾನಕ್ಕೆ ಪಾತ್ರರಾದರು. ಇವರು **'ಕರ್ನಾಟ ಭಾರತ ಕಥಾ ಮಂಜರಿ'** ಮತ್ತು **'ಐರಾವತ'** ಎಂಬ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ **'ರೂಪಕ ಸಾಮ್ರಾಜ್ಯ ಚಕ್ರವರ್ತಿ'** ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ. ನಡುಗನ್ನಡ ಕಾವ್ಯ ಪರಂಪರೆಯಲ್ಲಿ ಗದುಗಿನ ಭಾರತ ಅತ್ಯಂತ ಜನಪ್ರಿಯವಾದ ಮಹಾಕಾವ್ಯವಾಗಿದೆ.

*****

**4. ಕೆ. ವಿ. ಪುಟ್ಟಪ್ಪ : 'ಕುವೆಂಪು'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಕ್ರಿ. ಶ. 1904 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೋಕಿನ ಕುಪ್ಪಳಿ ಎಂಬಲ್ಲಿ ಜನಿಸಿದರು. ಇವರು **ಮಲೆನಾಡಿನ ಚಿತ್ರಗಳು,** ಕೊಳಲು, ಪಾಂಚಜನ್ಯ, ನನ್ನ ದೇವರು ಮತ್ತು ಇತರ ಕಥೆಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಬೊಮ್ಮನ ಹಳ್ಳಿಯ ಕಿಂದರಿಜೋಗಿ, ಜಲಗಾರ, ಬೆರಳ್ಗೆ ಕೊರಳ್, ನೆನಪಿನ ದೋಣಿಯಲ್ಲಿ, ಶ್ರೀರಾಮಾಯಣ ದರ್ಶನಂ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ಪಂಪ ಪ್ರಶಸ್ತಿ, ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

*****

**5. ಕವಿ ರನ್ನ :** ಮಹಾಕವಿ **ರನ್ನನು** ಕ್ರಿ. ಶ. ಸುಮಾರು 949 ರಲ್ಲಿ (ಹತ್ತನೆಯ ಶತಮಾನದಲ್ಲಿ) ಬಾಗಲಕೋಟೆ ಜಿಲ್ಲೆಯ **ಮುದುವೊಳಲು (ಈಗಿನ ಮುಧೋಳ)** ಎಂಬ ಗ್ರಾಮದಲ್ಲಿ ಜನಿಸಿದನು. ಈತನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು **'ಸಾಹಸ ಭೀಮ ವಿಜಯಂ', 'ಅಜಿತ ತೀರ್ಥಂಕರ ಪುರಾಣ ತಿಲಕಂ', ಪರಶುರಾಮ ಚರಿತಂ', 'ಚಕ್ರೇಶ್ವರ ಚರಿತಂ'** ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. **'ರನ್ನ ಕಂದ'** ಎಂಬ ನಿಘಂಟನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಇವನಿಗೆ ತೈಲಪನು **'ಕವಿ ಚಕ್ರವರ್ತಿ'** ಎಂಬ ಬಿರುದನ್ನು ನೀಡಿ ಗೌರವಿಸಿದನು. ಇವನು ಕನ್ನಡ **'ರತ್ನತ್ರಯ'**ರಲ್ಲಿ ಒಬ್ಬನಾಗಿದ್ದಾನೆ.

**6. ಲಕ್ಷ್ಮೀಶ : ಕವಿ ಲಕ್ಷ್ಮೀಶನು ಕ್ರಿ. ಶ. ಸುಮಾರು 1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜನಿಸಿದನು. ಇವನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು. ಇವರು **'ಜೈಮಿನಿ ಭಾರತ'** ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನಿಗೆ **ಉಪಮಾಲೋಲ, ಕರ್ನಾಟ ಕವಿಚೂತವನ ಚೈತ್ರ** ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

* * * * *

## ಪದ್ಯಭಾಗವನ್ನು ಪೂರ್ಣಗೊಳಿಸುವುದು.

ಮತಗಳೆಲ್ಲವು ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

****

ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

****

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪು ಎಣ್ಣೆ ಅರಿಸಿಣ ಜೀರಿಗಿ ಅಕ್ಕಿ ಸಕ್ಕಾರಿ ಬೆಲ್ಲಾ
ಗಂಗಳ ಚರಿಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

****

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥

****

ಹಸುರಾಗಸ; ಹಸುರು ಮುಗಿಲು;
    ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
    ಹಸುರು ಸಂಜೆಯೀ ಬಿಸಿಲೂ!

****

ನೆಲಕಿಱಿವೆನೆಂದು ಬಗೆದಿರ
ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ ।
ೞ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆನೇ ॥

****

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು
ಬಿಡೆವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ಲಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು॥

****



Use E-Papers, Save Tress
Above line hide when print out

## ಛಂದಸ್ಸು

**1. ಪ್ರಶ್ನೆ ಪತ್ರಿಕೆಯಲ್ಲಿ ಒಂದು ಸಾಲನ್ನು ಕೊಟ್ಟಿದ್ದರೆ ಅದು ಅಕ್ಷರ ಗಣದ ವೃತ್ತ ಪದ್ಯವಾಗಿರುತ್ತದೆ.**
**ಮೂರು ಮೂರು ಅಕ್ಷರಗಳಿಗೆ ಗಣ ವಿಭಾಗ ಮಾಡಬೇಕು.**
**ನಂತರ ಗುರು – ಲಘುಗಳನ್ನು ಗುರುತಿಸಬೇಕು. ಗಣದ ಹೆಸರನ್ನು ಗುರುತಿಸುವ ವಿಧಾನ.**

ಮೂರೂ ಅಕ್ಷರಗಳು ಗುರು (— — —) = **ಮ ಗಣ.**
ಮೂರೂ ಅಕ್ಷರಗಳು ಲಘು (ᑌ ᑌ ᑌ) = **ನ ಗಣ.**
ಮೊದಲ ಅಕ್ಷರ ಮಾತ್ರ ಗುರು (— ᑌ ᑌ) = **ಭ ಗಣ.**
ಮೊದಲ ಅಕ್ಷರ ಮಾತ್ರ ಲಘು (ᑌ — —) = **ಯ ಗಣ.**
ಮಧ್ಯದ ಅಕ್ಷರ ಮಾತ್ರ ಗುರು (ᑌ — ᑌ) = **ಜ ಗಣ.**
ಮಧ್ಯದ ಅಕ್ಷರ ಮಾತ್ರ ಲಘು (— ᑌ —) = **ರ ಗಣ.**
ಕೊನೆಯ ಅಕ್ಷರ ಮಾತ್ರ ಗುರು (ᑌ ᑌ —) = **ಸ ಗಣ.**
ಕೊನೆಯ ಅಕ್ಷರ ಮಾತ್ರ ಲಘು (— — ᑌ) = **ತ ಗಣ.**

**ಖ್ಯಾತ ಕರ್ನಾಟಕ ವೃತ್ತ ಪದ್ಯದ ಹೆಸರನ್ನು ಗುರುತಿಸುವ ವಿಧಾನ.**
1. ಮೊದಲ ಅಕ್ಷರ ಗುರು ನಂತರ ಲಘು
(— ᑌ ᑌ) = **ಉತ್ಪಲಮಾಲಾ ವೃತ್ತ.**
2. ಮೊದಲ ನಾಲ್ಕು ಅಕ್ಷರಗಳು ಲಘು ನಂತರ ಗುರು
(ᑌ ᑌ ᑌ ᑌ —) = **ಚಂಪಕಮಾಲಾ ವೃತ್ತ.**
3. ಮೊದಲ ಎರಡು ಅಕ್ಷರಗಳು ಲಘುಗಳು ಮತ್ತು ಎರಡು ಅಕ್ಷರಗಳು ಗುರುಗಳು ನಂತರ ಲಘು
(ᑌ ᑌ — — ᑌ) = **ಮತ್ತೇಭ ವಿಕ್ರೀಡಿತ ವೃತ್ತ.**
4. ಮೊದಲ ಮೂರು ಅಕ್ಷರಗಳು ಗುರುಗಳು ನಂತರ ಲಘು
(— — — ᑌ) = **ಶಾರ್ದೂಲ ವಿಕ್ರೀಡಿತ ವೃತ್ತ.**
5. ಮೊದಲ ನಾಲ್ಕು ಅಕ್ಷರಗಳು ಗುರುಗಳು ನಂತರ ಲಘು
(— — — — ᑌ) = **ಸ್ರಗ್ಧರಾ ವೃತ್ತ.**
6. ಮೊದಲ ಎರಡು ಅಕ್ಷರಗಳು ಲಘುಗಳು ಮತ್ತು ಮೂರು ಅಕ್ಷರಗಳು ಗುರುಗಳು ನಂತರ ಲಘು
(ᑌ ᑌ — — — ᑌ) = **ಮಹಾಸ್ರಗ್ಧರಾ ವೃತ್ತ.**

**2. ಪ್ರಶ್ನೆ ಪತ್ರಿಕೆಯಲ್ಲಿ ಎರಡು ಸಾಲುಗಳನ್ನು ಕೊಟ್ಟಿದ್ದರೆ ಅದು ಮಾತ್ರಾ ಗಣದ ಕಂದ ಪದ್ಯವಾಗಿರುತ್ತದೆ.**
ಗುರು – ಲಘುಗಳನ್ನು ಗುರುತಿಸಬೇಕು.
ನಂತರ ನಾಲ್ಕು ನಾಲ್ಕು ಮಾತ್ರೆಗಳಿಗೆ ಗಣ ವಿಭಾಗ ಮಾಡಬೇಕು.
ಮಾತ್ರಾ ಗಣದ **ಕಂದ ಪದ್ಯ** ಎಂದು ಬರೆಯಬೇಕು.

**3. ಪ್ರಶ್ನೆ ಪತ್ರಿಕೆಯಲ್ಲಿ ಮೂರು ಸಾಲುಗಳನ್ನು ಕೊಟ್ಟಿದ್ದರೆ ಅದು ಮಾತ್ರಾ ಗಣದ ಷಟ್ಪದಿ ಆಗಿರುತ್ತದೆ.**
ಗುರು – ಲಘುಗಳನ್ನು ಗುರುತಿಸಬೇಕು.
1. ಮೊದಲ ಸಾಲಿನಲ್ಲಿ 14 ಮಾತ್ರೆಗಳಿದ್ದರೆ ಮೂರು ಮತ್ತು ನಾಲ್ಕು ಮಾತ್ರಗಳಿಗೆ ಗಣ ವಿಭಾಗ ಮಾಡಬೇಕು.
ಮಾತ್ರಾ ಗಣದ **ಭಾಮಿನಿ ಷಟ್ಪದಿ** ಎಂದು ಬರೆಯಬೇಕು
2. ಮೊದಲ ಸಾಲಿನಲ್ಲಿ 20 ಮಾತ್ರೆಗಳಿದ್ದರೆ ಐದು ಐದು ಮಾತ್ರಗಳಿಗೆ ಗಣ ವಿಭಾಗ ಮಾಡಬೇಕು.
ಮಾತ್ರಾ ಗಣದ **ವಾರ್ಧಕ ಷಟ್ಪದಿ** ಎಂದು ಬರೆಯಬೇಕು.

## ಅಲಂಕಾರ

**1. ಕೊಟ್ಟಿರುವ ವಾಕ್ಯದಲ್ಲಿ ಅಂತೆ / ವೋಲ್ / ಹಾಂಗ / ಅಂಗ ಪದಗಳಿದ್ದರೆ ಅದು ಉಪಮಾಲಂಕಾರ.**
**ಅಲಂಕಾರ :– ಉಪಮಾಲಂಕಾರ**
**ಲಕ್ಷಣ :–** ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**2. "ಮಾರಿಗೌತಣವಾಯ್ತು ನಾಳಿನ ಭಾರತವು"**

**ಅಲಂಕಾರ :– ರೂಪಕಾಲಂಕಾರ**
**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'.**

**3. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**
**ಅಲಂಕಾರ :– ದೃಷ್ಟಾಂತಾಲಂಕಾರ**
**ಲಕ್ಷಣ :–** ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು **'ದೃಷ್ಟಾಂತಾಲಂಕಾರ'.**

**4. ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**
**ಅಲಂಕಾರ :– ಉತ್ಪ್ರೇಕ್ಷಾಲಂಕಾರ**
**ಲಕ್ಷಣ :–** ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು **ಉತ್ಪ್ರೇಕ್ಷಾಲಂಕಾರ.**

**5. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**
**ಅಲಂಕಾರ :– ಅರ್ಥಾಂತರನ್ಯಾಸಾಲಂಕಾರ.**
**ಲಕ್ಷಣ :–** ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸ ಅಲಂಕಾರ.**

**ಗಾದೆಗಳನ್ನು ವಿಸ್ತರಿಸಿ ಬರೆಯುವುದು.**
**ಯಾವುದೇ ಗಾದೆಯನ್ನು ನೀಡಿದರು ಇದನ್ನು ಕಡ್ಡಾಯವಾಗಿ ಬರೆಯಿರಿ.**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದು ಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬುವ ನುಡಿ ಹುಟ್ಟಿತು. ಜನಪದರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ.



Use E-Papers, Save Tress
Above line hide when print out